Industrial Employment (Standing Orders) (Karnataka Amendment) Bill, 2005, which was reserved for my consideration under the provisions of Article 200 of the Constitution of India, do hereby direct, in pursuance of the proviso to Article 201 of the Constitution, that the Bill be returned to the Legislature of the State of Karnataka to reconsider it and to modify the sub-section (3) of the Section 3 of the Industrial Employment (Standing Orders) (Karnataka Amendment) Bill, 2005, by adding the words 'and the employer providing proof there of' at the end of the amended Section 3(3)."

**ಅಧ್ಯಕ್ಷರು** :- ಈಗ ಮುಂದಿನ ವಿಷಯ ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆ. ಶ್ರೀಯುತರುಗಳಾದ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಹೆಚ್.ಸಿ.ಬಾಲಕೃಷ್ಣ, ಬಂಡೆಪ್ಪ ಕಾಶಂಪೂರ್, ಸಿ.ಎಸ್. ಪುಟ್ಟೇಗೌಡ ಹಾಗೂ ಇತರರು ರಾಮನಗರ ಜಿಲ್ಲೆ ರಾಮನಗರ ತಾಲ್ಲೂಕಿನ ಅರ್ಚಕರ ಹಳ್ಳಿಯಲ್ಲಿ ಸ್ಥಾಪಿಸಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ವಿಳಂಬವಾಗಿರುವ ಬಗ್ಗೆ ಅವರು ಇಲ್ಲಿ ಪ್ರಸ್ತಾಪವನ್ನು ಮಾಡುತ್ತಾರೆ.

## 8. ನಿಯಮ 69 ರ ಮೇರೆಗೆ ಚರ್ಚೆ

**ವಿಷಯ** :- ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು ಅರ್ಚಕರ ಹಳ್ಳಿಯಲ್ಲಿ ಸ್ಥಾಪಿಸಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ವಿಳಂಬ ಮಾಡಿರುವ ಬಗ್ಗೆ.

**ಅಧ್ಯಕ್ಷರು** :- ಈಗ ಮುಂದಿನ ವಿಷಯ ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವ ವಿಷಯದ ಬಗ್ಗೆ ಚರ್ಚೆ. ಶ್ರೀಯುತರುಗಳಾದ

ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಹೆಚ್.ಸಿ.ಬಾಲಕೃಷ್ಣ, ಬಂಡೆಪ್ಪ ಕಾಶೆಂಪೂರ್, ಸಿ.ಎಸ್.ಪುಟ್ಟೇಗೌಡ ಹಾಗೂ ಇತರರು ರಾಮನಗರ ಜಿಲ್ಲೆ ರಾಮನಗರ ತಾಲ್ಲೂಕಿನ ಅರ್ಚಕರ ಹಳ್ಳಿಯಲ್ಲಿ ಸ್ಥಾಪಿಸಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ವಿಳಂಬವಾಗಿರುವ ಬಗ್ಗೆ ಅವರು ಇಲ್ಲಿ ಪ್ರಸ್ತಾಪವನ್ನು ಮಾಡುತ್ತಾರೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ)** :- ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿಯೂ ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇವೆ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು)** :- ಮಾನ್ಯ ಅಧ್ಯಕ್ಷರೆ, ಇಬ್ಬರು ಕೂಡಿಯೇ ಹಂಚಿಕೊಂಡಿರುವಂತಹ ವಿಷಯ ಇದು. ಅದನ್ನು ಇಬ್ಬರು ಕೂಡಿ ಹಂಚಿಕೊಂಡಿದ್ದಾರೆ. ಶಿಕಾರಿಪುರಕ್ಕೆ ಏನು ಬೇಕೋ ಅದನ್ನು ಅವರು ತೆಗೆದುಕೊಂಡರು. ರಾಮನಗರಕ್ಕೆ ಏನು ಬೇಕೋ ಅದನ್ನು ಇವರು ತೆಗೆದುಕೊಂಡರು. ಇಲ್ಲಿ ಏನು ಜಗಳವಿದೆ. ಜಗಳವನ್ನು ಆಡಬೇಕಾದವರು ನಾವು ನಮ್ಮ constituencyಗಳಿಗೆ ಏನು ಇಲ್ಲ. ಬರೀ ಮೂರು ನಾಮ ಹಾಕುತ್ತೀರಿ. ಬಾಕಿ ಎಲ್ಲವನ್ನು ನೀವೇ ತೆಗೆದುಕೊಂಡಿದ್ದೀರಿ. ಈಗ ಚರ್ಚೆ ಏತಕ್ಕಾಗಿ ಬೇಕು? ತಾವು ಕೊಡುತ್ತೇವೆಂದು ಹೇಳಿದ್ದೀರಿ, ಅವರು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.....

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಇದು ಕೊಟ್ಟಾಗಿದೆ. ಪ್ರಾರಂಭವಾಗ ಬೇಕಷ್ಟೆ.

**ಶ್ರೀ ಡಿ.ಕೆ. ಶಿವಕುಮಾರ್** :- ರಾಮಚಂದ್ರೇಗೌಡರು ನಾನು ಪ್ರಾರಂಭ ಮಾಡುತ್ತೇನೆ, ಅಡಿಗಲ್ಲನ್ನು ಹಾಕಿಸುತ್ತೇನೆಂದು ಹೇಳಿದರೆ ಅದು ಮುಗಿದುಹೋಯಿತು. ಇಲ್ಲಿ ಆ ಬಗ್ಗೆ ಚರ್ಚೆ ಏತಕ್ಕಾಗಿ ಬೇಕು?

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿ ಸದನದಲ್ಲಿ ಗಲಾಟೆಯೂ ಕೂಡ ಆಗಿ ಅದನ್ನು ಸ್ಥಳಾಂತರ ಮಾಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡು ಅಲ್ಲಿಯೇ ಪ್ರಾರಂಭ ಮಾಡುತ್ತೇನೆಂಬ ಮಾತನ್ನು ಕೂಡ ಕೊಟ್ಟಿದ್ದರು. ಇದಕ್ಕೆ ಕಾರಣವೆಂದರೆ ಎರಡು ಎಕರೆ ಜಾಗದಲ್ಲಿ ಜಯನಗರದಲ್ಲಿ ಹಿಂದೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪನೆಯಾಗಿತ್ತು, ಆ ಎರಡು ಎಕರೆ ಜಾಗ ಸಾಕಾಗುವುದಿಲ್ಲವೆಂದು ಬೆಂಗಳೂರಿನ ಹೊರಭಾಗದಲ್ಲಿ ಪ್ರಾರಂಭ ಮಾಡಬೇಕೆಂಬ ಬಗ್ಗೆ

ತೀರ್ಮಾನವಾಗಿತ್ತು. ಅಂದಿನ ಮುಖ್ಯಮಂತ್ರಿಯವರಾದ ಶ್ರೀ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಅನೇಕ ಮೀಟಿಂಗ್‌ಗಳು ನಡೆದು ಒಂದು ಅಧಿಸೂಚನೆಯನ್ನು ಹೊರಡಿಸಿದರು. ಅಧಿನಿಯಮ 1994 ಕರ್ನಾಟಕ ಅಧಿನಿಯಮ 44(3)ನೇ ಪ್ರಕರಣದ 4ನೇ ಉಪಪ್ರಕರಣಕ್ಕೆ ತಿದ್ದುಪಡಿಯನ್ನು ಮಾಡಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿರತಕ್ಕದ್ದು ಎಂಬುದಕ್ಕೆ ಬದಲಾಗಿ ರಾಮನಗರದಲ್ಲಿರತಕ್ಕದ್ದು ಎಂಬ ಬದಲಾವಣೆಯನ್ನು ಮಾಡಿ ದಿನಾಂಕ 10ನೇ ಆಗಸ್ಟ್ 2007ರಂದು ಒಂದು ಅಧಿಸೂಚನೆಯನ್ನು ಹೊರಡಿಸಿದರು. ಅದನ್ನು ಹೊರಡಿಸಿದ ನಂತರ ಅಂದಿನ ಉಪಮುಖ್ಯಮಂತ್ರಿಗಳಾದಂತಹ ಹಾಗೂ ಹಣಕಾಸಿನ ಸಚಿವರಾದಂತಹ, ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅವರ ಬಜೆಟ್ ಭಾಷಣದಲ್ಲಿ ರಾಮನಗರವನ್ನು ಆರೋಗ್ಯನಗರವನ್ನಾಗಿ ಮಾಡುತ್ತೇನೆಂಬ ಮಾತನ್ನು ಆವತ್ತು ಅವರು ಹೇಳಿದರು. ಅದಕೋಸ್ಕರ 284 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಂದು ಅಂದಾಜಿಸಲಾಗಿ ಆರೋಗ್ಯ ವಿಶ್ವವಿದ್ಯಾಲಯವು 150 ಕೋಟಿ ರೂಪಾಯಿಗಳನ್ನು ಕೊಡುತ್ತದೆ. ಸರ್ಕಾರವು ಮುಂದಿನ 3 ವರ್ಷಗಳಲ್ಲಿ 133 ಕೋಟಿ ರೂಪಾಯಿಗಳನ್ನು ಕೊಡುತ್ತದೆ. ಅದೇ ಉದ್ದೇಶಕೋಸ್ಕರ 2007-08ನೇ ಸಾಲಿನಲ್ಲಿ 43 ಕೋಟಿ ರೂಪಾಯಿಗಳ ಅನುದಾನವನ್ನು ಬಜೆಟ್‌ನಲ್ಲಿ ಆ ವರ್ಷ ಅದಕ್ಕಾಗಿ ಇಟ್ಟಿದ್ದರು. ತದನಂತರ ಅದನ್ನು ಅರ್ಚಕರ ಹಳ್ಳಿಯಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿ, Acquisition Proceedings ಪ್ರಾರಂಭವಾಯಿತು. ಅದರಲ್ಲಿಯೂ ಕೂಡ ಆ ವೆಚ್ಚವನ್ನು ಏನು ಆ ಜಾಗವನ್ನು ತೆಗೆದುಕೊಳ್ಳುವುದಕ್ಕೆ , ಆ ವೆಚ್ಚವನ್ನು ಭರಿಸುವುದಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆಯವರು ಅವತ್ತು 5 ಕೋಟಿ ರೂಪಾಯಿಗಳನ್ನು ಕೆಐಎಡಿಬಿಗೆ ಬಿಡುಗಡೆ ಮಾಡಿದರು. ಆ ಹಣವನ್ನು ಬಿಡುಗಡೆ ಮಾಡಿದ ನಂತರ ಕೆಐಎಡಿಬಿಯಿಂದ ಒಂದು ಕಾಯಿದೆ 28(4)ರಲ್ಲಿ ತಿಳಿಸಿರುವಂತೆ ಭೂಸ್ವಾಧೀನದ ಅಂತಿಮ ಅಧಿಸೂಚನೆ ಪ್ರಕಟಣೆ ಹೊರಡಿಸಿದ ನಂತರ ಸದರಿ ಭೂಪ್ರದೇಶವು ಯಾವುದೇ ಋಣಭಾರ ಇಲ್ಲದೆ ಸರ್ಕಾರದ ಸ್ವತ್ತೆಂದು ಪರಿಗಣಿಸತಕ್ಕದ್ದು ಎಂದು ಕಾಯಿದೆ ವಿಧಿ 28(5)ರ ಅಡಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂಬ ವಿಚಾರದಿಂದ ಅದನ್ನು acquire ಮಾಡುವುದಕ್ಕೆ ಪ್ರಾರಂಭವಾಯಿತು. ತದನಂತರ ಅಲ್ಲಿಯ ಕೆಲವು ರೈತರುಗಳು ಕೋರ್ಟಿಗೆ ಹೋದರು. ಇದು ಕೋರ್ಟಿನಲ್ಲಿಯೂ ಕೂಡ ಸರ್ಕಾರದ ಪರವಾಗಿ ಆಗಿ ಅಲ್ಲಿ ಪ್ರಾರಂಭ ಮಾಡುವುದಕ್ಕೆ ತೀರ್ಮಾನವಾಯಿತು. ಮಾನ್ಯ ಮುಖ್ಯಮಂತ್ರಿಗಳು ಕೂಡ ಕಳೆದ

ಅಧಿವೇಶನದಲ್ಲಿ ಇದನ್ನು ಅಲ್ಲಿಯೇ ಮಾಡುತ್ತೇನೆಂದು ಅದನ್ನು ಸ್ಥಳಾಂತರ ಮಾಡುವುದಿಲ್ಲವೆಂದು ಒಪ್ಪಿಕೊಂಡರು. ಕೆಲವು ಮಂತ್ರಿಗಳು ಇದನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವ ಬಗ್ಗೆ ಹುನ್ನಾರವನ್ನು ನಡೆಸಿದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಇಲ್ಲಿ ಉತ್ತರವನ್ನು ಕೊಟ್ಟರು. ಅವರು ಉತ್ತರವನ್ನು ಕೊಟ್ಟು ಏಳು ತಿಂಗಳಾದರೂ ಕೂಡ ಇದುವರೆಗೂ ಕೂಡ ಅಲ್ಲಿ ಯಾವ ಕಾಮಗಾರಿಯನ್ನು ಕೂಡ ಪ್ರಾರಂಭ ಮಾಡಿರುವುದಿಲ್ಲ. ಅಲ್ಲಿ Land acquisition ಕೂಡ ಆಗಿದೆ. ಕೋರ್ಟಿನಲ್ಲಿರುವ ಬಗ್ಗೆಯೂ ಕೂಡ ಕೋರ್ಟು ನೇರವಾಗಿ ಅದನ್ನು dispose ಮಾಡಿ, ಅದನ್ನು ಮಾಡಬಹುದು ಎಂದು ರೈತರಿಗೆ ಪರಿಹಾರವನ್ನು ಕೊಡಬೇಕೆಂಬ ಬಗ್ಗೆ ತೀರ್ಮಾನವನ್ನು ಕೂಡ ಆಗಿದೆ. ಇತ್ತೀಚೆಗೆ ಮಾನ್ಯ ರಾಮಚಂದ್ರೇಗೌಡರು ಮಾತ್ರ ಸನ್ಮಾನ್ಯ ಆರೋಗ್ಯ ಶಿಕ್ಷಣ ಮಂತ್ರಿಗಳು ಅಲ್ಲಿಗೆ ಬಂದು ಈ ಜಾಗವು ಸಾಕಾಗುವುದಿಲ್ಲ. ಹೆಚ್ಚಿನ ಜಾಗವು ಬೇಕಾಗುತ್ತದೆನ್ನುವಂತಹ ಮಾತನ್ನು ಹೇಳಿದರು. ಅದಕ್ಕೆ ಇನ್ನು ಹೆಚ್ಚು ಜಾಗವನ್ನು ಮೀಸಲು ಇಟ್ಟರೆ ಅದಕ್ಕೆ ನಮ್ಮ ತಕರಾರು ಏನಿಲ್ಲ. ಆದರೆ ಇರತಕ್ಕಂತಹ ಜಾಗದಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳೆ ರಾಮನಗರ ಜಿಲ್ಲೆಯ ಜನಗಳ ಋಣ ನಿಮ್ಮ ಮೇಲಿದೆ. ನೀವು ಅನೇಕ ವರ್ಷಗಳಿಂದ ಹೋರಾಟವನ್ನು ಮಾಡಿಕೊಂಡು ನೀವು ಮುಖ್ಯಮಂತ್ರಿಗಳಾಗಿರುವುದು ಒಂದಾದರೆ ಅದಕ್ಕೆ ತಕ್ಕಂತೆ ಸನ್ಮಾನ್ಯ ಕುಮಾರಸ್ವಾಮಿಯವರನ್ನು ಆ ಭಾಗದಿಂದ ಆರಿಸಿ ಕಳುಹಿಸಿ ಅವರ ಜೊತೆಯಲ್ಲಿ ಸೇರಿ ಪ್ರಪ್ರಥಮಬಾರಿಗೆ ಉಪಮುಖ್ಯಮಂತ್ರಿಯನ್ನಾಗಿ ಮಾಡಿರುವಂತಹ ಜನ ರಾಮನಗರದವರು ಎಂಬುದನ್ನು ನೀವು ಮರೆಯಬಾರದು. ದಯಮಾಡಿ ತಾವು ಮಾತಿಗೆ ಮುಂಚೆ ಸೇಡಿನ ರಾಜಕಾರಣವನ್ನು ಮಾಡಬಾರದು.

(ಗೊಂದಲ)

**ಶ್ರೀ ಅಪ್ಪಚ್ಚುರಂಜನ್** :- ಸನ್ಮಾನ್ಯ ಕುಮಾರಸ್ವಾಮಿಯವರನ್ನು ಮುಖ್ಯಮಂತ್ರಿಯವರನ್ನಾಗಿ ಮಾಡಿರುವುದು ಮಾನ್ಯ ಯಡಿಯೂರಪ್ಪನವರು.

(ಗೊಂದಲ)

**ಶ್ರೀ ಸಿ.ಟಿ. ರವಿ** :- ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿರುವುದಕ್ಕೆ ಮಾನ್ಯ ಯಡಿಯೂರಪ್ಪನವರೆ ಕಾರಣ.

**ಒಬ್ಬ ಮಾನ್ಯ ಸದಸ್ಯರು** :- ನೀವು ಮಾಡಿರುವುದಕ್ಕೆ ರಾಮನಗರದವರಿಗೆ ಏಕೆ ಹೋಲಿಸುತ್ತೀರಿ.

**ಶ್ರೀ ಎಂ. ಚಂದ್ರಪ್ಪ** :- ಮಾನ್ಯ ಅಧ್ಯಕ್ಷರೆ, ... ...

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ರಾಮನಗರದಿಂದ ಅವರು ಗೆದ್ದುಕೊಂಡು ಬಂದಿದ್ದರಿಂದ ಅವರು ಮುಖ್ಯಮಂತಿಯಾಗಿರುವುದು. ಮಾನ್ಯ ಚಂದ್ರಪ್ಪನವರೆ ತಾವು ತಮ್ಮ ಅಭಿಪ್ರಾಯವನ್ನು ನಂತರ ವ್ಯಕ್ತಪಡಿಸಿರಿ. ನಾವು ಮಾತನಾಡಬೇಕು, ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಪ್ಪನವರಿಗೆ ತಾವು ದಯಮಾಡಿ ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಚಂದ್ರಪ್ಪ** :- ಮಾನ್ಯ ಅಧ್ಯಕ್ಷರೆ, .....

**ಅಧ್ಯಕ್ಷರು** :- ಮಾನ್ಯ ಚಂದ್ರಪ್ಪನವರೆ ತಾವು ಕುಳಿತುಕೊಳ್ಳಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಚಂದ್ರಪ್ಪನವರೆ ತಮ್ಮನ್ನು ಮಂತ್ರಿಯನ್ನಾಗಿ ಮಾಡುತ್ತಾರೆ ಕುಳಿತುಕೊಳ್ಳಿ. ಮುಂದಿನ ಅಧಿವೇಶನದ ನಂತರ ತಾವು ಮಂತ್ರಿಯಾಗುತ್ತೀರಿ. ತಾವು ಕುಳಿತುಕೊಳ್ಳಿ.

**ಶ್ರೀ ಸಿ.ಎಂ. ಉದಾಸಿ** :- ಇಲ್ಲಿ ಚರ್ಚೆ ನಡೆಯುತ್ತಿದೆ. ಮಾನ್ಯ ಬಾಲಕೃಷ್ಣರವರೇ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಭಾರತೀಯ ಜನತಾಪಾರ್ಟಿಯವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದಲೇ ಮಾನ್ಯ ಕುಮಾರಸ್ವಾಮಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿರುವುದು.

**ಶ್ರೀ ಹೆಚ್.ಸಿ.ಬಾಲಕೃಷ್ಣ** :- ಮಾನ್ಯ ಅಧ್ಯಕ್ಷರೆ, ನಾವು ಆ ಬಗ್ಗೆ ತಕರಾರು ಮಾಡುತ್ತಿಲ್ಲ. ಅವರು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾಗ.....

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ರಾಮನಗರ)** :- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಆ ಒಂದು ಘಟನೆಗಳು ನಡೆಯಿತಲ್ಲಾ ಅದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಬೇಕೆಂದರೆ ಬೆಂಗಳೂರಿನಲ್ಲಿ ಮುಂದೆ ಅಧಿವೇಶನ ಕರೆಯುತ್ತಿರಲ್ಲಾ ಅಲ್ಲಿ

ಈ ಬಗ್ಗೆ ಚರ್ಚೆ ಮಾಡೋಣ. ಈಗ ಉಪಮುಖ್ಯಮಂತ್ರಿ, ಮುಖ್ಯಮಂತ್ರಿಗಳಾನ್ನಾಗಿ ಮಾಡುವ ವಿಷಯ ಬಂದಾಗ ಮಾನ್ಯ ಉದಾಸಿಯವರು ಹಾಗೂ ಮಾನ್ಯ ಗೋವಿಂದಕಾರಜೋಳ ರವರು ನನ್ನ ಹತ್ತಿರ ಬಂದು ಸರ್ಕಾರ ರಚನೆ ಮಾಡುವ ಬಗ್ಗೆ ಏನು ಚರ್ಚೆ ಮಾಡಿದರು, ಈ ಎಲ್ಲಾ ವಿಷಯದ ಬಗ್ಗೆ ಬೇಕಾದರೆ ವಿವರವಾಗಿ ಚರ್ಚೆ ಮಾಡೋಣ. ಆದರೆ ಈಗ ಅವೆಲ್ಲವು ಬೇಕಿಲ್ಲ. ಅವೆಲ್ಲ ವಿಷಯಗಳು ಈಗ ಅಪ್ರಸ್ತುತ. ಅದನ್ನು ಮತ್ತೇ ಚರ್ಚೆ ಮಾಡಬೇಕೆಂದು ಎಲ್ಲರೂ ಬಯಸುವುದಾದರೆ, ಬೇಕಾದರೆ ಸುದೀರ್ಘವಾಗಿ ಚರ್ಚೆ ಮಾಡೋಣ.

**ಶ್ರೀ ಸಿ.ಎಂ. ಉದಾಸಿ :** ನಾವ್ಯಾರು ಅಪೇಕ್ಷೆನ್ನೇ ಪಟ್ಟಿಲ್ಲ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ಮಾನ್ಯ ಉದಾಸಿಯವರೆ, ಇವತ್ತು ನೀವು ಹೇಳಬಹುದು, ಅವತ್ತು ನಾನು ಅವರ ಜೊತೆಯಲ್ಲಿ ಕೈಜೋಡಿಸದೆ ಇದ್ದರೆ ಬಹುಶ: ಇವತ್ತು ಕಾಂಗ್ರೆಸ್ ಪಕ್ಷದವರು ಇಲ್ಲಿ ಏನು ಕುಳಿತಿದ್ದಾರೆ ಆ ಶಾಸಕರೆಲ್ಲರೂ ಅಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಆವತ್ತು ಬಿಜೆಪಿ ಈ ರಾಜಕೀಯದಿಂದ ಚಿತ್ರಣದಿಂದ ಹೊರಟು ಹೋಗುತ್ತಿತ್ತು. ನಾನು ಸಹಕಾರವನ್ನು ಕೊಟ್ಟಿರುವುದರಿಂದಲೇ ರಾಜ್ಯದಲ್ಲಿ ಬಿಜೆಪಿ ಉಳಿದುಕೊಂಡಿದೆ. ಇದರ ಬಗ್ಗೆ ಚರ್ಚೆಯನ್ನು ಮಾಡುವುದು ಬೇಡ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಅವರು ಅಂದು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿರಬಹುದು. ಸಂಖ್ಯಾಬಲದ ಪ್ರಕಾರ ಅವರು ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಸಹಕಾರ ಇಲ್ಲದೆ ಇದ್ದರೆ ಅದು ಆಗುತ್ತಿರಲಿಲ್ಲ. ಅವರು 106 ಜನರು ಗೆದ್ದು ಆಪರೇಷನ್ ಕಮಲ ಮಾಡಿ ಅವರು ಅಧಿಕಾರವನ್ನು ಪಡೆದುಕೊಂಡಿದ್ದಾರೆ.

**ಅಧ್ಯಕ್ಷರು** :- ಬಾಲಕೃಷ್ಣರವರೆ ನೇರವಾಗಿ ವಿಷಯಕ್ಕೆ ಬನ್ನಿ. ಈಗ ಆ ವಿಷಯವೆಲ್ಲಾ ಬೇಡ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಅವರು ಕೇಳಿರುವುದಕ್ಕಾಗಿ ನಾನು ಹೇಳುತ್ತಿರುವುದು.

**ಅಧ್ಯಕ್ಷರು** :- ಈಗ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ಆಗಬೇಕೋ ಅಥವಾ ಬೇಡವೋ ಅದರ ಬಗ್ಗೆ ತಾವು ಹೇಳಿ. ಆಮೇಲೆ ಉಳಿದಿರುವುದನ್ನು ಹೇಳಿ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ನಾನು ಹೇಳುತ್ತಿರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ನಾನು ಸೇಡಿನ ರಾಜಕಾರಣವನ್ನು ಮಾಡುವುದಿಲ್ಲವೆಂದು ಹೇಳಿ ನಮ್ಮ ಭಾಗದವರ ಮೇಲೆ ಸೇಡಿನ ರಾಜಕಾರಣವನ್ನು indirect ಆಗಿ ಮಾಡುತ್ತಿದ್ದಾರೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಗುರುತರವಾದ ಆರೋಪವನ್ನು ನಾನು ಮಾಡಬೇಕಾಗುತ್ತದೆ.

ನಾವು ಮಾಡುತ್ತೇವೆಂದು ಏಳು ತಿಂಗಳಾಗಿದೆ, ಇನ್ನೂ ಕೆಲಸ ಮಾತ್ರ ಪ್ರಾರಂಭವಾಗಿಲ್ಲ. ಅಲ್ಲಿ ಯಾವುದೇ ತಂಟೆ ತಕರಾರು ಇಲ್ಲ, ವ್ಯಾಜ್ಯಗಳಿಲ್ಲ. ಹಣವಿದೆ. 80 ಕೋಟಿ ರೂ.ಗಳಷ್ಟು ಹಣ ಕೇಂದ್ರ ಸರ್ಕಾರದಿಂದ ಬರುವುದನ್ನು ವಾಪಸ್ಸು ಕಳುಹಿಸುವ ಹುನ್ನಾರ ಇವತ್ತು ರಾಜ್ಯ ಸರ್ಕಾರದಲ್ಲಿ ನಡೆಯುತ್ತಿದೆ. ದಯಮಾಡಿ ಇದನ್ನು ಆದಷ್ಟು ಬೇಗ ಪ್ರಾರಂಭ ಮಾಡಲಿಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

**ಅಧ್ಯಕ್ಷರು** :- ಈಗ ಉದಾಸಿಯವರೇ ಉತ್ತರ ಹೇಳುವಿರಾ. ಈಗ ಅವರು ಮಾಡುತ್ತೇವೆಂದರೆ ಅಲ್ಲಿಗೆ ಚರ್ಚೆ ಮುಗಿಯುತ್ತದೆ.

**ಶ್ರೀ ಡಿ.ಕೆ. ಶಿವಕುಮಾರ್** :- ಇದು ನಿಯಮ 69ರ ವಿಚಾರ. ಈಗ ಒಂದೇ ಪ್ರಶ್ನೆ. ಇಲ್ಲಿ ಲೋಕೋಪಯೋಗಿ ಸಚಿವರು ಇದ್ದಾರೆ. ಹಿಂದೆ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾವು ಕೂಡ ಈ ಬಗ್ಗೆ ಪ್ರಸ್ತಾವನೆ ಮಾಡಿದ್ದೇವೆ. ಈ ಜಿಲ್ಲೆಯಲ್ಲಿ ಕನಕಪುರ, ಮಾಗಡಿ, ರಾಮನಗರ, ಚನ್ನಪಟ್ಟಣ ಸೇರಿ ಒಂದು ಹೊಸ ಜಿಲ್ಲೆ ಪ್ರಾರಂಭವಾಯಿತು ಆದರೆ ಇದು ರಾಜ್ಯಕ್ಕೆ ಸಂಬಂಧಪಟ್ಟದ್ದು. ಒಳ್ಳೆಯ State Highway ನಲ್ಲಿದ್ದಂತದ್ದು. ಕೇವಲ 50 ಕಿ.ಮೀ. ದೂರದಲ್ಲಿರುವಂತಹದ್ದು. ಒಂದು ರಾಜ್ಯದ ಸಂಸ್ಥೆಯನ್ನು ಈಗ ಬೆಳಗಾಂನಲ್ಲಿ ಹೇಗೆ V.T.U ಪ್ರಾರಂಭವಾಯಿತು. ಬಿಜಾಪುರದಲ್ಲಿ ಹೇಗೆ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಹೀಗೆ ನಾನಾ ಕಾರಣಗಳಿಂದ ಎಲ್ಲ ಕ್ಷೇತ್ರಗಳು ಕೂಡ ಹಂಚಿ ಎಲ್ಲಾ ಕಡೆಗೂ ಹೋಗಬೇಕೆನ್ನುವ ದೃಷ್ಟಿಯಿಂದ ಸಮತೋಲನ ಆಗಬೇಕು ಎಂದು ಹೇಳಿ ನಂಜುಂಡಪ್ಪನವರ ಆಧಾರದ ಮೇಲೆ highest backward ಮಾಗಡಿ ಆಮೇಲೆ ರಾಮನಗರ ಜಿಲ್ಲೆಗಳಾಗಿವೆ. ಆ ದೃಷ್ಟಿಯಿಂದ ಇದನ್ನು ಮಾಡಿದರು. ಈ ಹಿಂದೆ ನಮ್ಮ ಮಂತ್ರಿಗಳ ವಾದ ಇದರ ಬಗ್ಗೆ ಏನಿತ್ತೆಂದರೆ ನಮಗೆ ಜಾಗ ಕೊಟ್ಟಿಲ್ಲ, ಕೇಸ್ ಇದೆ

ಮುಂತಾದ ವಿಚಾರಗಳ ಪ್ರಸ್ತಾವನೆಯನ್ನು ಮಾಡಿದರು. ರಾಮಚಂದ್ರಗೌಡರು ಸಹ ಪ್ರಸ್ತಾವನೆ ಮಾಡಿದರು. ಹಿಂದೆ ಇದರ ಬಗ್ಗೆ ನಾವು detail ಆಗಿ ಹೋದಾಗ ನನ್ನ ಹತ್ತಿರ ಇಲ್ಲಿ ಒಂದು ದಾಖಲೆ ಇದೆ. 11.09.2007ರಂದು ಕೆ.ಐ.ಎ.ಡಿ.ಬಿ.ಯವರು ಪೊಸೆಷನ್ ಸರ್ಟಿಫಿಕೇಟ್ ಅನ್ನು the possession of lands acquired by KIADB measuring 145 acres 9 guntas in Archakara halli , village , Kasaba, Ramanagara taluk, detailed annexure has been handed over to the Director, Medical Education ಎಂದು ಅವರು possession certificate ಅನ್ನು ಮಾಡಿದ್ದಾರೆ. ಅದನ್ನು Director of Medical Education, Assistant Executive Engineer, P.W.D ಹಾಗು ಎಲ್ಲರೂ receive ಮಾಡಿಕೊಂಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)**

ನೀವು ದುಡ್ಡು ಇಟ್ಟಿದ್ದೀರಿ. ಆ ದುಡ್ಡಿನ ಬಗ್ಗೆ transactions ಸರಿ ಇಲ್ಲ. ಕ್ಯಾಬಿನೆಟ್‌ನಲ್ಲಿ ಅದಾಯಿತು, ಇದಾಯಿತು, ಇವರೇನೋ ಹೌಸ್ ಕಮಿಟಿಗೆ ಕೇಳಿದರು, ತಪ್ಪೇನೋ ಅವೆಲ್ಲಾ ಈಗ ಚರ್ಚೆ ಮಾಡುವ ಸಂದರ್ಭ ಅಲ್ಲ. Just ವಿಚಾರ. ನಾನು ಸಹ ರಾಜೀವ್ ಗಾಂಧಿ ಹೆಲ್ತ್ ಯುನಿವರ್ಸಿಟಿಯಲ್ಲಿ ಡೈರೆಕ್ಟರ್ ಆಗಿದ್ದೆ. ನಾನು ಸೆನೆಟ್‌ನಲ್ಲಿ ಎರಡು ಮೂರು ವರ್ಷ ಕೆಲಸ ಮಾಡಿದ್ದೆನು. ಸುಮಾರು ನೂರು ಕೋಟಿ ರೂಪಾಯಿ ಮೇಲೆ ಅಲ್ಲಿ ಹಣವಿದೆ. ಕೇಂದ್ರ ಸರ್ಕಾರ ಕೂಡ ಈ ಒಂದು ಮೆಡಿಕಲ್ ವಿಚಾರದಲ್ಲಿ ಬೇಕಾದಷ್ಟು ಹಣವನ್ನು ಕೊಡಲಿಕ್ಕೆ ಬದ್ಧವಾಗಿದೆ. ಆದ್ದರಿಂದ ಯಾರೂ ಶಾಶ್ವತವೇನಿಲ್ಲ. ಈಗ ಇಲ್ಲಿ ವಿಧಾನಸೌಧ ಪ್ರಾರಂಭ ಮಾಡುತ್ತಿದ್ದೀರಿ. ಇವರು ಪ್ರಾರಂಭ ಮಾಡಿದರೂ, ನೀವು ಕಟ್ಟಡ ಮಾಡಿದರೂ ಇಲ್ಲಿ ಚರಿತ್ರೆ ಉಳಿಯುತ್ತದೆ. ಹಾಗೆ ಸ್ವಾಮಿ ವಿವೇಕಾನಂದ ಒಂದು ಮಾತನ್ನು ಹೇಳುತ್ತಾರೆ. "Be bold hearted when you are defeated , be large hearted when you are victorious." ಹೀಗೆ ಭಗವಂತ ನಿಮಗೆ ಒಂದು ಅವಕಾಶವನ್ನು ಕೊಟ್ಟಿದ್ದಾನೆ. ಮುಖ್ಯಮಂತ್ರಿಗಳಿಗೆ ಒಂದು ಅವಕಾಶವನ್ನು ಕೊಟ್ಟಿದ್ದಾನೆ. ಹಿಂದೆ ತಾವು ಹೋಗಿ ಅಡಿಗಲ್ಲು ಹಾಕಿ ಪ್ರಾರಂಭ ಮಾಡಿದ್ದನ್ನು ನಮ್ಮನ್ನೆಲ್ಲಾ ಕರೆಸಿ, ಆ ಜಿಲ್ಲೆಯವರನ್ನು ಕರೆಸಿ ಆದಷ್ಟು ಬೇಗ ಪ್ರಾರಂಭ ಮಾಡಿಸುವಂಥ ಕೆಲಸವನ್ನು ತಾವು

ಮಾಡಿದರೆ ಇದರ ಬಗ್ಗೆ ಚರ್ಚೆಯೂ ಬೇಡ. ಇದಕ್ಕೆ ಇನ್ನೂ ಚರ್ಚೆಗೆ ಅವಕಾಶವೇ ಬೇಡ. You should be very large hearted. ಈ ಮಾತನ್ನು ಮುಖ್ಯಮಂತ್ರಿಯವರಿಗೆ ಹೇಳುತ್ತಿದ್ದೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಅಧ್ಯಕ್ಷರೇ, ಇದಕ್ಕೆ ಮುಖ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತಿದ್ದೇನೆ. ಏಕೆಂದರೆ ಇದು 7 ತಿಂಗಳ ನಂತರ ...

**(ಗೊಂದಲ)**

ಅಧ್ಯಕ್ಷರೇ ಇದನ್ನು ಡೀಎಯೇಟ್ ಮಾಡುವುದು ಬೇಡ ದಯಮಾಡಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ಚರ್ಚೆ ಮುಗಿಯಲಿ.

**ಉಪಾಧ್ಯಕ್ಷರು** :- ವಿಷಯಾಂತರ ಬೇಡ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಈಗ ಡಿ.ಕೆ.ಶಿವಕುಮಾರ್ ಹೇಳಿದಂತೆ ಇದರಲ್ಲಿ ಯಾವುದೇ ತಕರಾರು ಇಲ್ಲ. ತಕರಾರು ಇಲ್ಲದಿದ್ದ ಸಮಯದಲ್ಲಿ ಸರ್ಕಾರ ಹಾಗೆ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಆ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಮುಖ್ಯಮಂತ್ರಿಗಳು ಯಾವಾಗ ಅಡಿಗಲ್ಲು ಹಾಕುತ್ತಾರೆ ಅದರ ಬಗ್ಗೆ ಮುಖ್ಯಮಂತ್ರಿಗಳು ಇಲ್ಲಿ ಹೇಳಬೇಕು.

**ಉಪಾಧ್ಯಕ್ಷರು** :- ಉನ್ನತ ಶಿಕ್ಷಣ ಸಚಿವರು ಉತ್ತರ ಹೇಳಿ.

**ಶ್ರೀ ಸಿ.ಎಸ್. ಪುಟ್ಟೇಗೌಡ** :- ಮುಖ್ಯಮಂತ್ರಿಗಳಿಗೆ ಮುಕ್ತವಾದ ಮನಸ್ಸಿದೆ. ಸುಮ್ಮನೆ ನೀವೇ ಏಕೆ ಬಾಲಕೃಷ್ಣರವರೆ ತರಲೆ ತೆಗೆಯುತ್ತೀರಿ. ದಯಮಾಡಿ ಮುಖ್ಯಮಂತ್ರಿಗಳು ಹೇಳುತ್ತಾರೆ. ಮುಖ್ಯಮಂತ್ರಿಗಳಿಗೆ ಒಳ್ಳೆಯ ಮನಸ್ಸಿದೆ. ಅವರಿಗೆ ಬಹಳ ಪ್ರಿಯವಾದಂಥ ಜಿಲ್ಲೆಯಿದು. ದಯವಾಮಾಡಿ ರಾಮಚಂದ್ರಗೌಡರೇ ಮುಖ್ಯಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತಿದ್ದೇವೆ. ಅವರು ಹೇಳಿದ ಮೇಲೆ ಏನಾದರೂ ತಕರಾರು ಇದ್ದರೆ ಮಾತನಾಡಿ. ಅವರು ಮುಕ್ತ ಮನಸ್ಸಿನಲ್ಲಿದ್ದಾಗ ನೀವೆ ತರಲೆ ಮಾಡುವುದು ಬೇಡ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ರಾಮಚಂದ್ರಗೌಡರು ಕೂಡ ಆ ಭಾಗದಿಂದ ವಿಧಾನ ಪರಿಷತ್‌ನ ಸದಸ್ಯರಾಗಿದ್ದಾರೆ. ಅವರಿಗೂ ಕೂಡ ಅಷ್ಟೇ ಜವಾಬ್ದಾರಿಯಿದೆ. ದಯಮಾಡಿ ಅದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು)** :- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆ ನೀಡುತ್ತಿದ್ದೇನೆ.

ರಾಮನಗರ ಜಿಲ್ಲೆ ಮತ್ತು ತಾಲ್ಲೂಕಿನ ಅರ್ಚಕರ ಹಳ್ಳಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್‌ನ್ನು ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ಶುಶ್ರೂಷಾ ಮಹಾವಿದ್ಯಾಲಯಗಳ ಜೊತೆಗೆ 250 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, 750 ಹಾಸಿಗೆಗಳ ಸುಸಜ್ಜಿತ ಆಧುನಿಕ ಆಸ್ಪತ್ರೆ ಮತ್ತು ಇತರ ಪೂರಕ ಕಟ್ಟಡಗಳನ್ನು ಸ್ಥಾಪಿಸಲು ಕೆ.ಐ.ಎ.ಡಿ.ಬಿ, 247.28 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಪೂರ್ವಬಾವಿ ಅಧಿಸೂಚನೆಯನ್ನು ಹೊರಡಿಸಿತ್ತು. ನಂತರ 216.24 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಇದರ ಪೈಕಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ 71.15 ಎಕರೆ ಜಮೀನನ್ನು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ 145.09 ಎಕರೆ ಜಮೀನನ್ನು ನೀಡಲು ಉದ್ದೇಶಿಸಲಾಗಿದೆ.

ಈ ಯೋಜನೆಯ ವೆಚ್ಚವು ರೂ.310.00 ಕೋಟಿ ಎಂದು ನಿರ್ಧರಿಸಲ್ಪಟ್ಟಿದೆ. ಇದರ ಪೈಕಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ರೂ.120.00 ಕೋಟಿ, ಕೇಂದ್ರ ಸರ್ಕಾರವು ರೂ.80.00 ಕೋಟಿ ಮತ್ತು ರಾಜ್ಯ ಸರ್ಕಾರವು ರೂ.110.00 ಕೋಟಿ ವೆಚ್ಚವನ್ನು ಭರಿಸಲು ಇದುವರೆವಿಗೆ ರೂ.9.63 ಕೋಟಿ ಹಣವನ್ನು ಕೆ.ಐ.ಎ.ಡಿ.ಬಿ.ಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಉಳಿದ ರೂ.42.37 ಕೋಟಿ ನೀಡಲು ಬಾಕಿಯಿದೆ.

ಭೂಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುವ ಜಮೀನುಗಳ ಪೈಕಿ ಕೆಲವೊಂದು ಜಮೀನುಗಳ ಭೂಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಭೂಸ್ವಾಧೀನದ ವಿರುದ್ಧ ತಡೆಯಾಜ್ಞೆಗಳನ್ನು ತಂದಿದ್ದರ ಪ್ರಯುಕ್ತ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ. ಸದರಿ ತಡೆಯಾಜ್ಞೆಗಳು ಇತ್ತೀಚೆಗೆ ತೆರವುಗೊಂಡಿರುತ್ತವೆ.

ಆದ್ದರಿಂದ ರಾಮನಗರ ಜಿಲ್ಲೆ ಮತ್ತು ತಾಲ್ಲೂಕಿನ ಅರ್ಚಕರ ಹಳ್ಳಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್‌ನ್ನು ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ಶುಶ್ರೂಷಾ ಮಹಾವಿದ್ಯಾಲಯಗಳ

ಜೊತೆಗೆ 250 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, 750 ಹಾಸಿಗೆಗಳ ಸುಸಜ್ಜಿತ ಆಧುನಿಕ ಆಸ್ಪತ್ರೆ ಮತ್ತು ಇತರ ಪೂರಕ ಕಟ್ಟಡಗಳನ್ನು ಸ್ಥಾಪಿಸಲು ಬಾಕಿ ಇರುವ ಭೂಸ್ವಾಧೀನ ವೆಚ್ಚವನ್ನು ಕೆ.ಐ.ಎ.ಡಿ.ಬಿ.ಗೆ ಬಿಡುಗಡೆ ಮಾಡುವುದರೊಂದಿಗೆ ಕಾಮಗಾರಿಯನ್ನು ನಿಯಮಾನುಸಾರ ಪ್ರಾರಂಭಿಸಲು ಕ್ರಮ ಮುಂದುವರಿಸಲಾಗುವುದು.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಸನ್ಮಾನ್ಯ ಅಧ್ಯಕ್ಷರೇ, 7 ತಿಂಗಳಿನಿಂದ ನಿಯಮಾನುಸಾರವೆಂದು ಹೇಳುತ್ತಿದ್ದಾರೆ. ಈಗ ಎಲ್ಲಾ ಅನುಕೂಲಗಳಿವೆ. ಜಾಗ ಕ್ಲಿಯರ್ ಇದೆ, ದುಡ್ಡಿದೆ, ಯಾವಾಗ ಅಡಿಗಲ್ಲು ಹಾಕುತ್ತಾರೆಂದು ಹೇಳಿಬಿಡಲಿ.

**ಶ್ರೀ ಡಿ.ಕೆ. ಶಿವಕುಮಾರ್** :- 145 ಎಕರೆ ಪೊಸೆಷನ್ ಕೊಟ್ಟಿದ್ದೀರಲ್ಲಾ. See, here we have a document. ಆ 145 ಎಕರೆಯ ಪೊಸೆಷನ್ ಅನ್ನು ಆ ಕೆ.ಐ.ಎ.ಡಿ.ಬಿ.ಯವರು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್‌ನವರಿಗೆ handover ಮಾಡಿದ್ದಾರೆ. ತೆಗೆದುಕೊಳ್ಳಿ, ಪೊಸೆಷನ್ ಸರ್ಟಿಫಿಕೇಟ್ ಇಲ್ಲೇ ಇದೆ. ನೀವು ಮೊದಲು ಪ್ರಾರಂಭ ಮಾಡಿ. ತಕರಾರು ಎಲ್ಲಾ ಆಮೇಲೆ ನೋಡೋಣ.

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)** :- ಈಗ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ 71.15 ಎಕರೆ ಜಮೀನನ್ನು ನೀಡಲು ಉದ್ದೇಶಿಸಲಾಗಿದೆ. ಆ ಕಾರಣದಿಂದ ಈ ಕೆಲಸ ಅಪೂರ್ಣವಾಗಿದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ)** :- ಈಗ ರೈತರು ಏನು ತಕರಾರು ಎತ್ತಿದ್ದರು. ಆ ರೈತರೇ ಈಗಾಗಲೇ ಪ್ರತಿನಿತ್ಯ ಬಂದು ನಮಗೆ ಹಣ ಕೊಡಲಿಲ್ಲ, ನಮಗೆ ಹಣ ಕೊಡಿಸಿ ಎಂದು ಪ್ರತಿನಿತ್ಯ ಬಂದು ದುಂಬಾಲು ಬಿದ್ದಿದ್ದಾರೆ. ಯಾರ ತಕರಾರು ಹಾಕಿಕೊಂಡಿದ್ದರೋ ಅವರೇ ಮುಂದೆ ಬಂದಿದ್ದಾರೆ. ಆದ್ದರಿಂದ ರೈತರೇ ಈಗ ಸ್ವಯಂಪ್ರೇರಣೆಯಿಂದ ಕೊಡಲಿಕ್ಕೆ ಮುಂದೆ ಬಂದಿರುವುದರಿಂದ ಹಣವೂ ಈಗಾಗಲೇ ಅದರಲ್ಲಿ 2007-08ನೇ ಆರ್ಥಿಕ ವರ್ಷದಲ್ಲಿ 44.00 ಕೋಟಿ ರೂ.ಗಳನ್ನು ಇವತ್ತು ಬಜೆಟ್‌ನಲ್ಲಿಯೂ ಇಟ್ಟಿದ್ದೀರಿ. ಕೇಂದ್ರ ಸರ್ಕಾರದ ಅಧಿಕ ಹೆಚ್ಚುವರಿಯಾಗಿ 80.00 ಕೋಟಿ ರೂ.ಗಳಷ್ಟು ಹಣವೂ ಇತ್ತು. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಿಂದ 120.00 ಕೋಟಿ ರೂ.ಗಳನ್ನು ಕೊಡಲಿಕ್ಕೆ ಅಲ್ಲಿಯೂ ತೀರ್ಮಾನ ಮಾಡಿಕೊಂಡಿದ್ದಾರೆ. ಇಲ್ಲಿ ಹಣದ ಕೊರತೆ ಇಲ್ಲ. ಹಣ ಇದ್ದರೂ ಸಹ

ಇವತ್ತು ರೈತರು ಭೂಮಿ ಕೊಡಲಿಕ್ಕೆ ತಯಾರಾಗಿದ್ದರೂ ಸಹ ಏಳು ತಿಂಗಳಿನಿಂದ ಏತಕ್ಕೆ ಈ ರೀತಿ ಕೆಲಸ ಪ್ರಾರಂಭ ಮಾಡದೇ ಇರುವಂಥ ವಾತಾವರಣ ಇಟ್ಟುಕೊಂಡಿದ್ದೀರಿ ಆ ದೃಷ್ಟಿಯಿಂದ ಇವತ್ತು ಮುಖ್ಯಮಂತ್ರಿಗಳು ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವಂಥ ವಿಷಯವನ್ನು ದಯವಿಟ್ಟು ಸದನದಲ್ಲಿ ತಿಳಿಸಿದರೆ ನಾನು ಅವರಿಗೆ ಆಭಾರಿಯಾಗಿರುತ್ತೇನೆ.

**ಶ್ರೀ ಸುರೇಶ್ ಗೌಡ (ತುಮಕೂರು ಗ್ರಾಮಾಂತರ):** ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ಚರ್ಚೆಯಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ತುಮಕೂರು ಜಿಲ್ಲೆಯಲ್ಲಿರುವ ತುಮಕೂರು ವಿಶ್ವವಿದ್ಯಾನಿಲಯದ ಬಗ್ಗೆ ಪ್ರಸ್ತಾಪಮಾಡಬೇಕೆಂದಿದ್ದೆನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಉಪಾಧ್ಯಕ್ಷರೆ, ಈಗ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ಮಾತ್ರ ಚರ್ಚೆ ಮಾಡುತ್ತಿರುವುದರಿಂದ ಬೇರೆ ವಿಶ್ವವಿದ್ಯಾನಿಲಯದ ಬಗ್ಗೆ ಚರ್ಚೆ ಮಾಡಿ ವಿಷಯಾಂತರ ಮಾಡುವುದು ಬೇಡ.

(ಗೊಂದಲ)

**ಶ್ರೀ ಸುರೇಶ್ ಗೌಡ** :- ತುಮಕೂರು ಜಿಲ್ಲೆಯಲ್ಲಿ 5 ವರ್ಷಗಳ ಹಿಂದೆ ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಲಾಗಿದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಉಪಾಧ್ಯಕ್ಷರೆ, ಮೊದಲು ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ತೀರ್ಮಾನವಾಗಲಿ. ಆನಂತರ ಮಾನ್ಯ ಸದಸ್ಯರು ತುಮಕೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡಲಿ.

(ಗೊಂದಲ)

**ಶ್ರೀ ಸುರೇಶ್‌ಗೌಡ** :- ತುಮಕೂರು ವಿಶ್ವವಿದ್ಯಾನಿಲಯ ಗ್ರಾಮೀಣ ಮಟ್ಟದಲ್ಲಿದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನೋಟೀಸ್ ಕೊಟ್ಟು ಮಾತನಾಡಲಿ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಬಯಸುತ್ತೇನೆ.

**SRI D.K. SHIVAKUMAR** :- We are also party to the said decision. I was also in the cabinet. ಯಾವ ಯೋಜನೆಗೆ ಕ್ಯಾಬಿನೆಟ್‌ನಲ್ಲಿ ಮಂಜೂರಾತಿ ಸಿಕ್ಕಿದ ಮೇಲೆ ಅದಕ್ಕೆ ಹಣ ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡಬೇಕಾಗುತ್ತದೆ. ತಾವು ಈಗಾಗಲೇ ಇದಕ್ಕೆ ಬದ್ಧರಾಗಿದ್ದೀರಿ. ಈ ವಾರದಲ್ಲಿ ನಾವು ಅಲ್ಲಿಗೆ ಹೋಗಿ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ ಎಂದು ಹೇಳಿದರೆ ಮುಗಿದು ಹೋಯಿತು. Just simple.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಸಚಿವರಾದಂಥ ರಾಮಚಂದ್ರೇ ಗೌಡರು ಮೊನ್ನೆ ದಿವಸ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ದಯಮಾಡಿ ಉತ್ತರ ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ನಾಯಕರಾದಂಥ ಮಾನ್ಯ ಕುಮಾರಸ್ವಾಮಿಯವರು ಕೂಡ ಇದರ ಬಗ್ಗೆ ಮನವಿ ಮಾಡಿದ್ದಾರೆ.

**ಶ್ರೀ ಸಿ.ಎಂ. ಉದಾಸಿ** :- ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು 70 ಎಕರೆ 15 ಗುಂಟೆ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಮಾನ್ಯ ಸಚಿವರೇ, ಇದಕ್ಕೆ ಅಲ್ಲಿ ಯಾರದು ತಕರಾರು ಇಲ್ಲ.

**ಶ್ರೀ ಸಿ.ಎಂ. ಉದಾಸಿ** :- ಅತೀ ಶೀಘ್ರದಲ್ಲಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್** :- ಶಿವಮೊಗ್ಗದಲ್ಲಿ ಹಾಗೂ ಹಾವೇರಿಯಲ್ಲಿ ಮಾಡಿದರೆ ನಾವೇನು ನಿಮ್ಮ ತಕರಾರಿಗೆ ಬರುವುದಿಲ್ಲ. We will encourage it. ಏಕೆಂದರೆ, ಇದು ಇನ್ನೂ ಬೆಳೆಯಬೇಕಾಗುತ್ತದೆ. ಆದರೆ, ಇವತ್ತು ಇಲ್ಲಿ ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಅದಕ್ಕೆ ಏಕೆ ನೀವು ಮೊಟಕು ಮಾಡುವುದಕ್ಕೆ ಏಕೆ ಹೋಗುತ್ತಿದ್ದೀರಿ? Be large hearted. ಮಾನ್ಯ ಮುಖ್ಯಮಂತ್ರಿಗಳು ಈಗ ತುಂಬಾ ಖುಷಿಯಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಉತ್ತರ ಹೇಳಬೇಕು.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** :- ಮಾನ್ಯ ಉಪಾಧ್ಯಕ್ಷರೆ, ಇನ್ನು 70 ಎಕರೆ ಭೂಮಿ ಸ್ವಾಧೀನವಾಗಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಜಮೀನು ಕೊಡುವುದಕ್ಕೆ

ನಾವು ತಯಾರಿದ್ದೇವೆಂದು ರೈತರು ಪ್ರತಿ ದಿವಸ KIADB ಕಚೇರಿ ಮುಂದೆ ನಿಂತಿದ್ದಾರೆ. ಆದರೆ, ನೀವು ಇದುವರೆಗೂ ಏತಕ್ಕಾಗಿ ಅಸಡ್ಡೆ ಮಾಡಿಕೊಂಡು ಬರುತ್ತಿದ್ದೀರಿ ಎನ್ನತಕ್ಕಂಥದ್ದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ.

**ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)** :- ಸನ್ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿ ಮಾಡುತ್ತಿದೆ ಎಂಬ ವಾತಾವರಣ ಸೃಷ್ಟಿಯಾಗಿದೆ. ಆದರೆ, ಅಲ್ಲಿನ ವಾಸ್ತವಿಕ ಸತ್ಯಾಂಶಗಳು ಇಲ್ಲಿರತಕ್ಕಂಥ ಎಲ್ಲರಿಗೂ ಸಹ ಗೊತ್ತಿದೆ. ಈ ಹಿಂದೆ ಜಮೀನನ್ನು ಗುರುತು ಮಾಡಿರಲಿಲ್ಲ. ಮತ್ತೆ acquisition proceedings ಪೂರ್ಣವಾಗಿರಲಿಲ್ಲ, ಪರಿಹಾರ ಕೊಟ್ಟಿರಲಿಲ್ಲ, estimate ಆಗಿರಲಿಲ್ಲ. ಮತ್ತೆ ಟೆಂಡರ್ ಸರಿಯಾದ ರೀತಿಯಲ್ಲಿ ಕರೆದಿರಲಿಲ್ಲ ಹಾಗೂ ಒಬ್ಬ ಗುತ್ತಿಗೆದಾರನಿಗೆ 34 ಕೋಟಿ ರೂಪಾಯಿಗಳಷ್ಟು ಮುಂಗಡವಾಗಿ ಕೊಟ್ಟಿದ್ದರು. ಈ ಹಣವನ್ನು recovery ಮಾಡಿ ಅವತ್ತಿನ ದಿವಸ ಕಾನೂನು ಬಾಹಿರವಾಗಿ ಕೆಲಸ ಮಾಡಿದಂತಹ Chief Engineer ಹಾಗೂ Superintending Engineer ರವರನ್ನು suspensionನಲ್ಲಿಟ್ಟು ಈಗ ತನಿಖೆ ನಡೆಯುತ್ತಿದೆ. ಈಗ KIADB ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ 9 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇನ್ನು 63 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈಗಾಗಲೇ, Final Notification ಆಗಿದೆ. ಮತ್ತೆ 216 ಎಕರೆ ಜಮೀನಿಗೆ ಸಂಬಂಧಪಟ್ಟಂತೆ, ಕೋರ್ಟ್‌ನಲ್ಲಿ ಇದ್ದಂಥ ಕೇಸ್‌ಗಳನ್ನು ರೈತರು ವಾಪಸ್ಸು ಪಡೆದುಕೊಂಡಿದ್ದಾರೆ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯಕ್ಕೆ 310 ಕೋಟಿ ರೂಪಾಯಿಗಳು ಇದೆ. ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಆದಷ್ಟು ಬೇಗ ಎಂದು ಉತ್ತರ ಹೇಳತಕ್ಕಂಥದ್ದಲ್ಲ.

**ಉಪಾಧ್ಯಕ್ಷರು** : ಆದಷ್ಟು ಬೇಗ ಕ್ರಮತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಮುಂದಿನ ವಿಚಾರಕ್ಕೆ ಹೋಗೋಣ.

**ಶ್ರೀ ಹೆಚ್.ಸಿ.ಬಾಲಕೃಷ್ಣ** :- 7 ತಿಂಗಳುಗಳ ಹಿಂದೆ ಕೂಡ ಇದೇ ಮಾತನ್ನು ಹೇಳಿದ್ದಾರೆ.

**ಉಪಾಧ್ಯಕ್ಷರು** :- ಮಾನ್ಯ ಮುಖ್ಯಮಂತ್ರಿಗಳು ನಿಯಮಾನುಸಾರ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ, ಈಗ ಸದರಿ ವಿಷಯವನ್ನು ಮುಕ್ತಾಯ ಮಾಡೋಣ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- 7 ತಿಂಗಳುಗಳ ಹಿಂದೆ ಇದೇ ಮಾತನ್ನು ಹೇಳಿದ್ದರು. ಆದರೆ, ಈಗ ಎಲ್ಲಾ clear ಆಗಿದೆ.

**ಉಪಾಧ್ಯಕ್ಷರು** :- 7 ತಿಂಗಳುಗಳಿಂದ ಏತಕ್ಕಾಗಿ delay ಆಯಿತು ಎಂಬುದರ ಬಗ್ಗೆ ಕಾರಣವನ್ನು ಸಹ ಹೇಳಿದ್ದಾರೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- ಈಗ ಎಲ್ಲಾ clear ಆಗಿದೆ. ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಹೇಳಲಿ. ಅಂದರೆ, 15 ದಿವಸದಲ್ಲಿ ಅಥವಾ ಒಂದು ತಿಂಗಳಿನಲ್ಲಿ ಮಾಡಲಾಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಅಲ್ಲಿ ಜಾಗವಿದೆ ಹಾಗೂ ಹಣ ಕೂಡ ಇದೆ. ಮತ್ತೆ ಎಲ್ಲಾ ಸಮಸ್ಯೆಗಳು ಸಹ clear ಆಗಿದೆ. ಆದ್ದರಿಂದ, ಏತಕ್ಕೋಸ್ಕರ delay ಮಾಡುತ್ತಿದ್ದಾರೆ.

**ಉಪಾಧ್ಯಕ್ಷರು** :- ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಈ ವಿಷಯವನ್ನು ಮುಕ್ತಾಯ ಮಾಡೋಣ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- 15 ದಿವಸದಲ್ಲಿ ಅಥವಾ ಯಾವಾಗ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

**ಡಾ॥ ಬಿ.ಎಸ್.ಯಡಿಯೂರಪ್ಪ** :- ಮಾನ್ಯ ಉಪಾಧ್ಯಕ್ಷರೆ, ನಾನು ಮತ್ತು ಮಾನ್ಯ ಕುಮಾರಸ್ವಾಮಿ, ಮಾನ್ಯ ರೇವಣ್ಣನವರು ಮತ್ತು ನೀವು ಹಾಗೂ ಪ್ರತಿಪಕ್ಷದ ನಾಯಕರು ಯಾವತ್ತು ಒಳ್ಳೆಯ ಮುಹೂರ್ತ ಎಂದು ಹೇಳಿದರೆ, ಅವತ್ತು ಮಾಡೋಣ.

**ಉಪಾಧ್ಯಕ್ಷರು** :- ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:- ಅವರು ಆ ಸಂದರ್ಭದಲ್ಲಿ ಉಪಮುಖ್ಯಮಂತ್ರಿಯಾಗಿದ್ದಾಗ, ನಾವು ಮತ್ತು ಅವರು ಅಲ್ಲಿಗೆ ಹೋಗಿ ಗುದ್ದಲಿ ಪೂಜೆ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಆದ್ದರಿಂದ, ಈಗ ಅಲ್ಲಿ ಕೆಲಸ ಪ್ರಾರಂಭವಾಗಬೇಕಾಗಿದೆಯಷ್ಟೆ.

**ಉಪಾಧ್ಯಕ್ಷರು** :- ಆದಷ್ಟು ಬೇಗ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ** :- ಮಾನ್ಯ ಉಪಾಧ್ಯಕ್ಷರೆ, ಸರಿಯಾದ ರೀತಿಯಲ್ಲಿ ಅವರು ನಮಗೆ ಮಾಹಿತಿಯನ್ನು ಕೊಡುತ್ತಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಅಲ್ಲಿನ ಭೂಮಿಗೆ 4 (1) ಮತ್ತು 6 (1) ಹಾಗೂ award ಮಾಡಿ possession ಸಹ ತೆಗೆದುಕೊಂಡಿದ್ದಾರೆ. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಹೈಕೋರ್ಟ್‌ನಲ್ಲಿ ಇದರ ಬಗ್ಗೆ ತೀರ್ಮಾನವಾಗಿ judgment ಕೂಡ ಆಗಿದೆ. ರೈತರು ಭೂಮಿ ಕೊಡುವುದಕ್ಕೆ ತಯಾರಾಗಿದ್ದಾರೆ.

**ಉಪಾಧ್ಯಕ್ಷರು** :- ಈಗ ಮಾನ್ಯ ರೇವಣ್ಣನವರೇ, ಆದಷ್ಟು ಶೀಘ್ರವಾಗಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಸದರಿ ವಿಷಯವನ್ನು ಮುಕ್ತಾಯ ಮಾಡೋಣ.

**ಶ್ರೀ ಹೆಚ್.ಸಿ. ಬಾಲಕೃಷ್ಣ** :- 7 ತಿಂಗಳುಗಳ ಹಿಂದೆಯೇ ಆಗಬೇಕಾಗಿತ್ತು. ಇನ್ನೂ ಅತೀ ಶೀಘ್ರವಾಗಿ ಮಾಡುತ್ತೇವೆಂದರೆ ಯಾವಾಗ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಲಿ.

**ಉಪಾಧ್ಯಕ್ಷರು** :- 7 ತಿಂಗಳು ಯಾವ ಕಾರಣಕ್ಕಾಗಿ delay ಆಗಿದೆ ಎನ್ನುವುದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ಇಲ್ಲಿಗೆ ಈ ವಿಷಯವನ್ನು ಮುಕ್ತಾಯ ಮಾಡೋಣ.

**ಶ್ರೀ ಹೆಚ್.ಡಿ. ರೇವಣ್ಣ** :- ಈ ವಾರದಲ್ಲಿ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ** :- ನಾನು, ಕುಮಾರಸ್ವಾಮಿ ಹಾಗೂ ಇವರು ಒಟ್ಟಿಗೆ ಕುಳಿತುಕೊಂಡು ಮಾತನಾಡುತ್ತೇವೆ ಎನ್ನತಕ್ಕಂಥ ಮಾತು ಬಂದಿರಲಿಲ್ಲ. ಆದರೆ, ಇವತ್ತು ಬಂದಿದೆ. ದಯವಿಟ್ಟು ಇದನ್ನು ಒಪ್ಪಿಕೊಳ್ಳಿ.

**ಶ್ರೀ ಹೆಚ್.ಡಿ.ರೇವಣ್ಣ** :- ಮಾನ್ಯ ಮುಖ್ಯಮಂತ್ರಿಗಳು ಮುಂದಿನ ವಾರ ಮಾಡುತ್ತೇವೆ ಎಂಬುದರ ಬಗ್ಗೆ ಸ್ಪಷ್ಟಪಡಿಸಲಿ.

**ಉಪಾಧ್ಯಕ್ಷರು** :- ಈಗಾಗಲೇ ಅವರು ಹೇಳಿದ್ದಾರೆ. ಸದರಿ ವಿಷಯವನ್ನು ಮುಕ್ತಾಯ ಮಾಡಿ ಮುಂದಿನ ವಿಷಯಕ್ಕೆ ಹೋಗೋಣ. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಮಾಡೋಣ.

**ಶ್ರೀ ಟಿ.ಬಿ. ಜಯಚಂದ್ರ** :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಂಜೆ 5 ಗಂಟೆ 45 ನಿಮಿಷವಾಗಿದೆ.

**ಉಪಾಧ್ಯಕ್ಷರು** :- ಆಗಲಿ. ಪರವಾಗಿಲ್ಲ ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀ ಟಿ.ಬಿ. ಜಯಚಂದ್ರ** :- ಸದರಿ ವಿಷಯವನ್ನು ಬೆಳಿಗ್ಗೆ ಪ್ರಾರಂಭ ಮಾಡೋಣ. ಈಗ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಉಪಾಧ್ಯಕ್ಷರು** :- ತಾವು ನಿನ್ನೆ ದಿವಸ ರಾಜ್ಯಪಾಲರ ಭಾಷಣದ ಬಗ್ಗೆ ಅರ್ಧ ಚರ್ಚೆ ಮಾಡಿದ್ದೀರಿ. ಈಗ ತಾವು ಪ್ರಾರಂಭ ಮಾಡಿ ಅದನ್ನಾದರೂ ಮುಗಿಸಿ.

**ಶ್ರೀ ಟಿ.ಬಿ. ಜಯಚಂದ್ರ** :- ಈಗ ಮಾನ್ಯ ರುದ್ರೇಶ್‌ಗೌಡರು ಮಾತನಾಡುತ್ತಾರೆ.

**ಉಪಾಧ್ಯಕ್ಷರು** :- ಆನಂತರ ಎಲ್ಲರಿಗೂ ಅವಕಾಶ ಕೊಡುತ್ತೇನೆ. ತಾವು ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಟಿ.ಬಿ. ಜಯಚಂದ್ರ** :- ಮಾನ್ಯ ರುದ್ರೇಶ್‌ಗೌಡರು ಈಗ ಪ್ರಾರಂಭ ಮಾಡುತ್ತಾರೆ.

**ಉಪಾಧ್ಯಕ್ಷರು** :- ಮಾನ್ಯ ರುದ್ರೇಶ್‌ಗೌಡರೇ, ತಾವೇ ಪ್ರಾರಂಭ ಮಾಡಿ.

## 9. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವರದಿಯ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದು) :

**ಶ್ರೀ ವೈ.ಎನ್. ರುದ್ರೇಶ್‌ಗೌಡ (ಬೇಲೂರು):** ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಮೊನ್ನೆ ನಮಗೆ ಕರ್ನಾಟಕ ರಾಜ್ಯದ ರಾಜ್ಯಪಾಲರು ವರದಿಯನ್ನು ಈ ವಿಧಾನ ಸಭಾ ಹೌಸ್‌ನಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಕೆಲವೊಂದು ವಿಚಾರಗಳನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ವರದಿಯಲ್ಲಿ ಶಕ್ತಿಶಾಲಿ ಮತ್ತು ಸಮೃದ್ಧಿ ಕರ್ನಾಟಕ ನಿರ್ಮಾಣ ಮಾಡಲು ಅಭಿವೃದ್ಧಿಪರವಾದಂಥ ಸ್ಪಂದನಾಶೀಲ ಆಡಳಿತ ನೀಡುವ ಬಗ್ಗೆ ಹೇಳಿದ್ದಾರೆ. ಈ ಸಮಾರಂಭದಲ್ಲಿ ನಾನು ಹೇಳುವುದು ಇಷ್ಟೆ. ಸಮೃದ್ಧಿಯಾದಂಥ ಕರ್ನಾಟಕ ನಿರ್ಮಾಣ ಮಾಡುವುದು ಎಂದು ಹೇಳಿ ಸಭಾಧ್ಯಕ್ಷರೆ, ಆ ಸಮಯದಲ್ಲಿ ನನ್ನ ಕ್ಷೇತ್ರವಾದ ಬೇಲೂರಿನಲ್ಲಿ ಸುಮಾರು 350 ಕಿ.ಮೀ.P.W.D ರಸ್ತೆ ಇದೆ. ಆದರೆ,